



# ಮಾಪಾಳವೆಂಬ ‘ಸಮುದ್ರ ಮಹಾಫಲ’

**ಮಾಪಾಳದ ಬೀಜ ವಿಷಕ್ಕೆ ಪರಿಣಾಮಕಾರಿ ಮದ್ದು. ಆದರೆ, ಮಾಪಾಳದ ಮರಗಳೇ ತೀರ ವಿರಳ.**

■ ವಿನು ಗಂಗೆ

ಸಮುದ್ರ ಮಾಪಾಳ ಅಥವಾ ನಂಜಿನ ಕಾಯಿಯ (**Barringtonia racemosa**) ಅಗಾಧ ಮಹತ್ವಕ್ಕೂ ‘ಸಮುದ್ರ ಮಹಾಫಲ’ ಎಂಬ ಅದರ ವಿಶೇಷಣಕ್ಕೂ ಸಂಬಂಧ ಇರಬೇಕು.

ನಾಲ್ಕು ವರ್ಷಗಳ ಹಿಂದೆ ಒಂದು ದಿನ ನಮ್ಮ ಮನೆಯವರು ಊರಲ್ಲಿದ್ದಾಗ, ಇಲಿಯೋ ಮತ್ತೊಂದು ಪ್ರಾಣಿಯೋ ಹೊಟ್ಟೆಯ ಮೇಲೆ ಗಿಬರಿತ್ತು. ಅದರಿಂದ ಉಂಟಾದ ಉರಿ ಹಾಗೂ ಕೆರೆತ ಅರಿಶಿನ–ಕೊಬ್ಬರಿ ಎಣ್ಣೆ, ಆಯಿಂಟ್‌ಮೆಂಟ್‌ಗಳಿಂದ ಕಡಿಮೆಯಾಗಲಿಲ್ಲ. ಆಗ ನಮ್ಮ ಅತ್ತೆಯವರು ಒಂದು ಬೀಜ ತಂದು, ತೇದು ಹೊಟ್ಟೆಗೆ ಹಚ್ಚಿದರು. ಕೆಲ ಹೊತ್ತಿನಲ್ಲಿ ಉರಿ–ಕೆರೆತ ಪೂರ್ತಿ ಮಾಯ! ಆಗ ನನ್ನ ಅರಿವಿನ ಪರಿಧಿಯೊಳಗೆ ಕಾಲಿಟ್ಟದ್ದು ಈ ಮಾಪಾಳದ ಬೀಜ. ನಂತರ ನಿಧಾನವಾಗಿ ತಿಳಿದದ್ದು ಇದರ ಅಗಾಧತೆ.

ಮಾಪಾಳದ ಬೀಜದಲ್ಲಿ ದೇಹಕ್ಕೆ ಸೇರಿದ ವಿಷವನ್ನು ತೆಗೆಯುವ ಅದ್ಭುತ ಶಕ್ತಿ ಇದೆ. ಒಂದು ರೀತಿ ಪ್ರತಿವಿಷದ ಹಾಗೆ. ಸಾಮಾನ್ಯವಾಗಿ ಚೇಳು, ಚೆಗಟ, ಕಣಜ ಕಡಿದಾಗ ಅದರ ವಿಷಬಾಧೆ, ತೀವ್ರ ತುರಿಕೆ ಹಾಗೂ ನೋವು ಉಂಟಾಗುತ್ತದೆ. ಅಂತೆಯೇ, ದೇಹಕ್ಕೆ ಸೇರದ ವಸ್ತು ತಿಂದಾಗ ತೀವ್ರ ಅಲರ್ಜಿ ಉಂಟಾಗುತ್ತದೆ. ಸಣ್ಣ ಮಕ್ಕಳಿಗೆ ಮೈಯಲ್ಲಿ ಅಲ್ಲಲ್ಲಿ ಗುಳ್ಳೆಗಳು ಏಳುತ್ತವೆ. ಕೆಲವರಿಗೆ ಮೂತ್ರ ನಾಳದ ಸೋಂಕು ಉಂಟಾಗುತ್ತದೆ. ಇವೆಲ್ಲ ಸಮಸ್ಯೆಗಳಿಗೂ ಮಾಪಾಳ ಅತ್ಯಂತ ಪರಿಣಾಮಕಾರಿ. ವಾಂತಿ, ಬೇಧಿಗೆ ಮದ್ದು ಕೂಡ. ತೇದು ಹಚ್ಚುವುದು, ತೇದು ತಿನ್ನುವುದು ಎರಡೂ ರೀತಿಯಲ್ಲಿ ಬಳಕೆ ಇದೆ.



ಮಲೆನಾಡಿನಲ್ಲಿ ಈ ಬೀಜದ ಉಪಯೋಗ ಬಹಳಷ್ಟು. ಆದರೆ, ಮರ ತೀರಾ ವಿರಳ. ಹಿತ್ತಲಲ್ಲೋ ತೋಟದಲ್ಲೋ ಕೆಲವು ಕಡೆ ಬೆಳೆಸಿರುತ್ತಾರೆ. ಬಹುತೇಕ ಎಲ್ಲಾ ತೊಂದರೆಗೂ ಇದನ್ನೇ ಬಳಕೆ ಮಾಡುವುದು ನನಗೆ ರೂಢಿಯಾಗಿದೆ. ಹಾಗಾಗಿ ನಾನು ಯಾವುದೇ ಊರಿಗೆ ಹೋದರೂ ಮಾಪಾಳದ ಅರ್ಧ ಬೀಜವಾದರೂ ನನ್ನ ಬಳಿ ಇರುತ್ತದೆ.

ಸಕ್ಕರೆ ಕಾಯಿಲೆಯಿಂದ ಕೊಳೆತು ಕಪ್ಪಾದ ಕಾಲು ಕೂಡ ಇದರ ಬೀಜ ತೇದು ದಿನಾ ಒಂದು ಚಮಚ ಕುಡಿದಾಗ ಸರಿಹೋಗಿದೆಯಂತೆ. ಆದರೆ ಇದರ ಪ್ರತ್ಯಕ್ಷ ಅನುಭವ ನನಗಿಲ್ಲ. ಹಿಂದೆ ಈ ಮರ ಸಹಜವಾಗಿ ಅಲ್ಲಲ್ಲಿ ಇರುತ್ತಿತ್ತು. ಈಗ ಆಧುನಿಕ ಕಾಲದಲ್ಲಿ ಈ ಬೀಜದ ಬಳಕೆ, ಮರ ಇಲ್ಲವೇ ಇಲ್ಲ ಅನ್ನುವಂತಾಗಿದೆ. ಬೀಜ ಕೂಡಾ ಉಪಯೋಗಕ್ಕೆ ಸಿಗುವುದು ದುರ್ಲಭ. ಸಮುದ್ರ ಮಹಾಫಲ ಎನ್ನುವುದು ಎಂಥ ಅನ್ವರ್ಥಕ ನಾಮ ಎನ್ನುವುದು ಮಲೆನಾಡಿನ ಹಿರಿಯರಿಗೆ ಚೆನ್ನಾಗಿ ತಿಳಿದಿದೆ.

ಮರವಂತೂ ಚೆನ್ನಾಗಿ ಬಿಸಿಲು, ನೀರು ಸಿಕ್ಕರೆ ವರ್ಷ ಪೂರ್ತಿ ಕಾಯಿ ಕೊಡುತ್ತದೆ. ಅಲಂಕಾರಿಕವಾಗಿ ಕೂಡಾ ಬೆಳೆಸಬಹುದು. ಬರೀ ಬೀಜ ಬಳಸಿದರೆ ಸಾಕೇ? ಬೆಳೆಸಿ ಉಳಿಸಬೇಡವೇ? ಎಂಬ ನನ್ನ ಮನೋಭಾವ ತಿಳಿದ ನನ್ನ ಓರಗಿತ್ತಿ ನನಗಾಗಿ ಎರಡು ಬಲಿತ ಕಾಯಿಯನ್ನು ಸಸಿ ಮಾಡಿಕೊಟ್ಟರು. ಬೀಜದಿಂದ ಸಸಿ ಆಗುವುದಿಲ್ಲ. ಬಲಿತ ಕಾಯಿಯನ್ನೇ ಮಣ್ಣಿನಲ್ಲಿ ಹಾಕಬೇಕು.

ಜೀವನದಲ್ಲಿ ಒಂದಾದರೂ ಮರ ಬೆಳೆಸಬೇಕು ಎನ್ನುವ ಆಸೆ ನಿಮಗಿದ್ದರೆ, ಮಾಪಾಳ ಬೆಳೆಸಲು ನಿರ್ಧರಿಸಿ.

ಪ್ರತಿಕ್ರಿಯಿಸಿ: **feedback@sudha.co.in**